ದಿನಾಂಕಃ 13.07.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಡಿ.ಸಿ.ಪಿ. ವಕೀಲರಿಂದಃ -</u>

9. ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನಾನು, ಚಾಸಾ.3 ರಿಂದ ಚಾಸಾ.15 ಒಂದೇ ಜಾತಿಗೆ ಸೇರಿದವರು ಎಂದರೆ ಸರಿ. ಚಾಸಾ.16 ರವರು ನಮ್ಮ ಜನಾಂಗಕ್ಕೆ ಸೇರಿದವರು ಅಲ್ಲ. ನಾನು ಕೂಲಿ ಕೆಲಸ ಮಾಡಿಕೊಂಡಿರುತ್ತೇನೆ. ನನ್ನ ಗಂಡ ಇರುವುದಿಲ್ಲ.

10. ನನ್ನ ಮನೆ ಮತ್ತು ಆರೋಪಿಯ ಮನೆ ಅಕ್ಕಪಕ್ಕದ ರಸ್ತೆಗಳಲ್ಲಿ ಇರುತ್ತವೆ. ಚಾಸಾ.4 ರವರು ಪಕ್ಕದ ರಸ್ತೆಯಲ್ಲಿ ವಾಸ ಮಾಡುತ್ತಿದ್ದಾರೆ ಮತ್ತು ಉಳಿದವರೆಲ್ಲಾ ನನ್ನ ಮನೆಯ ರಸ್ಸೆಯಲ್ಲೇ ವಾಸ ಮಾಡುತ್ತಿದ್ದಾರೆ.

11. ನಾನು ಮತ್ತು ಚಾಸಾ.2 ತುಂಬಾ ವಿಶ್ವಾಸದಿಂದ ಇದ್ದೇವೆ ಎಂದರೆ ಸರಿ. ಚಾಸಾ.2 ಬ್ರಾಹ್ಮಣ ಜಾತಿಗೆ ಸೇರಿದವರು. ನನಗೆ ಕಷ್ಟ ಬಂದಾಗ ಚಾಸಾ.2 ರವರು ಸಹಾಯ ಮಾಡುತ್ತಾರೆ ಎಂದರೆ ಸರಿ. ಚಾಸಾ.2 ರವರು ಕೇಳಿದಲ್ಲಿ ನಮ್ಮಿಂದಾಗುವ ಸಹಾಯ ನಾವು ಮಾಡುತ್ತೇವೆ ಎಂದರೆ ಸರಿ.

12. ಚಾಸಾ.9, ಚಾಸಾ.10 ಮತ್ತು ಚಾಸಾ.12 ರವರು ಹೋಗುತ್ತಿದ್ದಾಗ ಚಾಸಾ.2 ರವರು ಕರೆದಲ್ಲಿ ನೀವು ಹೋಗುತ್ತೀರಿ ನಾನು ಕರೆದಾಗ ಬರುವುದಿಲ್ಲ ಎಂದು ಆರೋಪಿ ಚುಡಾಯಿಸುತ್ತಿದ್ದ. ಆತ ಆ ರೀತಿ ಚುಡಾಯಿಸಿ 5 ವರೆ ವರ್ಷಗಳಾದವು. ಘಟನೆಯಾಗುವ ಮೊದಲು ಅರೋಪಿ ಹಲವಾರು ಸಾರಿ ಆ ರೀತಿ ಚುಡಾಯಿಸಿರುತ್ತಾನೆ. ಆರೋಪಿ ಚುಡಾಯಿಸುತ್ತಿದ್ದ ಕುರಿತು ನಾವು ಪೊಲೀಸರಿಗೆ

ಫಿರ್ಯಾದನ್ನು ಈ ಮುಂಚೆ ನೀಡಿರುವುದಿಲ್ಲ. ಆರೋಪಿ ಆ ರೀತಿ ಚುಡಾಯಿಸುತ್ತಿದ್ದಾಗ ಯಾರು ಇದ್ದರು ಎಂದರೆ ಶಾಲಾ ಮಕ್ಕಳು ಜೊತೆಯಾಗಿ ಹೋಗುತ್ತಿದ್ದರು, ಆದರೆ ಯಾರು ಇದ್ದರು ಎಂದು ನನಗೆ ಹೇಳಲು ಬರುವುದಿಲ್ಲ.

13. ಆರೋಪಿ ಜೆ.ಎಂ.ಜೆ. ಚಿತ್ರಮಂದಿರದಲ್ಲಿ ಪ್ರೋಜೆಕ್ಟರ್ ಸಹಾಯಕನಾಗಿ ಪ್ರತಿದಿನ ಕೆಲಸ ಮಾಡುತ್ತಿದ್ದಾನೆ ಎಂದರೆ ಸರಿ. ಕೊನೆಯ ದೇಖಾವೆ ಸಾಯಂಕಾಲ 7.30 ರಿಂದ ರಾತ್ರಿ 10.30 ತನಕ ಇರುತ್ತದೆ ಎಂದರೆ ಸರಿ.

14. ಆರೋಪಿ ಚುಡಾಯಿಸುತ್ತಿದ್ದ ಕುರಿತು ಆರೋಪಿಯನ್ನು ವಿಚಾರಿಸಲು ಯಾವ ದಿನಾಂಕದಂದು ಹೋಗಿದ್ದೆವು ಎಂದರೆ ದಿನಾಂಕ ನೆನಪಿಲ್ಲ. ನಾನು, ನನ್ನ ಅಕ್ಕ ಮತ್ತು ನನ್ನ ತಂಗಿ ಆರೋಪಿಯ ಮನೆಯ ಬಳಿ ವಿಚಾರಿಸಲು ಹೋಗಿದ್ದೆವು. ಅವರೆಂದರೆ ಗಿರಿಜಾ, ಗೀತಾ, ಲಲಿತಾ, ಆಶಾ, ರೇಷ್ಮಾ, ರಂಜಿನಿ, ಶಾಲಿನಿ, ಕಾವ್ಯ ಮತ್ತು ಕಾವ್ಯಶ್ರೀ ಕೇಳಲು ಹೋಗಿದ್ದೆವು. ನಮ್ಮನ್ನು ಬಿಟ್ಟು ಬೇರೆ ಯಾರನ್ನು ಸೇರಿಸಲಿಲ್ಲ.

15. ನನ್ನ ಮುಖ್ಯ ವಿಚಾರಣೆಯಲ್ಲಿ, ನೀವೆಲ್ಲಾ ಏಕೆ ಬಂದಿದ್ದೀರಿ, ನಿಮ್ಮನ್ನು ಕಡಿದು ಹಾಕುತ್ತೇನೆ, ನೀವು ಹೊಲೆಯರು, ನೀವು ಎಲ್ಲಿಗೆ ಹೋದರು ಏನ್ನನ್ನು ಮಾಡಿಕೊಳ್ಳಲು ಆಗುವುದಿಲ್ಲ, ನಿಮ್ಮನ್ನು ಯಾರು ಕೇರ್ ಮಾಡುವುದಿಲ್ಲ ಎಂದು ಹೇಳಿರುವ ವಿಷಯವನ್ನು ನಾನು ಮೊದಲ ಭಾರಿಗೆ ನ್ಯಾಯಾಲಯದಲ್ಲಿ ಹೇಳಿರುತ್ತೇನೆ ಎಂದರೆ ಸರಿ. ಸದರಿ ವಿಷಯವನ್ನು ನನ್ನ ದೂರಿನಲ್ಲಾಗಲೀ ಅಥವಾ ಹೇಳಿಕೆಯಲ್ಲಾಗಲೀ ಹೇಳಿರುವುದಿಲ್ಲ.

16. ನನಗೆ ಒಬ್ಬಳೇ ಮಗಳಿದ್ದು, ಅವಳು ಚಾಸಾ.9 ಮತ್ತು ಆಕೆ ಡಿಗ್ರಿ ಮಾಡಿರುತ್ತಾಳೆ. ಚಾಸಾ.2 ರವರು ನನಗೆ ಯಾವ ದಿನಾಂಕದಂದು

ಎಷ್ಟು ಹಣವನ್ನು ಕೊಟ್ಟಿದ್ದರು ಎಂದು ಹೇಳಲು ಬರುವುದಿಲ್ಲ. ಚಾಸಾ.2 ರವರು ನನ್ನ ಮಗಳಿಗೆ ಓದಲು ಹಣ ಕೊಡುತ್ತಿದ್ದರು. ಚಾಸಾ.2 ರವರು ಯಾವ, ಯಾವ ದಿನಾಂಕದಂದು, ಎಷ್ಟು ಜನರನ್ನು, ಯಾವ ಯಾವ ಸ್ಥಳಗಳಿಗೆ ಪ್ರವಾಸಕ್ಕೆ ಕರೆದುಕೊಂಡು ಹೋಗಿದ್ದರು ಎಂದರೆ ಶೃಂಗೇರಿಗೆ ಒಂದು ಸಲ ಕರೆದುಕೊಂಡು ಹೋಗಿದ್ದರು, ಆದರೆ ಯಾವ ದಿನಾಂಕದಂದು ಮತ್ತು ಒಟ್ಟು ಎಷ್ಟು ಜನರನ್ನು ಎಂದು ನನಗೆ ಹೇಳಲು ಬರುವುದಿಲ್ಲ.

17. ಕತ್ತಿ ಮೊಣಕೈವರೆಗೆ ಇತ್ತು. 2-3 ಅಡಿ ಉದ್ದ ಇದ್ದಿರಬಹುದೋ ಎಂದರೆ ಇರಬಹುದು. ಕತ್ತಿಯ ಮೇಲೆ ವಿಶೇಷ ಗುರುತುಗಳು ಇರಲಿಲ್ಲ. ಆ ಕಾರಣದಿಂದ ಇದೇ ಕತ್ತಿ ಎಂದು ಹೇಳಲು ಬರುವುದಿಲ್ಲ ಎಂದರೆ ವಿಶೇಷವಾದ ಗುರುತುಗಳು ಇರಲಿಲ್ಲ, ಆದರೆ ಇದೇ ಕತ್ತಿಯಾಗಿತ್ತು. ಈಗ ನ್ಯಾಯಾಲಯದ ಮುಂದಿರುವ ಕತ್ತಿ 2 ಅಡಿ ಇರಬಹುದು. ಈಗ ನ್ಯಾಯಾಲಯದ ಮುಂದಿರುವ ಕತ್ತಿಯನ್ನೇ ಉಪಯೋಗಿಸಲಾಗಿತ್ತು ಎಂದು ನಾನು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಕತ್ತಿಯನ್ನು ಮನೆಯ ಪಕ್ಕದಲ್ಲಿ ಬಿಸಾಕಿದ್ದರು. ಸದರಿ ಕತ್ತಿಯನ್ನು ಆರೋಪಿ ಕೃಷ್ಣಮೂರ್ತಿ ಭಟ್ಟರಿಗೆ ಸೇರಿದ ಶೆಡ್ ನಲ್ಲಿ ಬಿಸಾಡಿ ಹೋಗಿದ್ದನು ಎಂದು ಹೇಳಿರುವ ವಿಷಯವನ್ನು ನಾನು ಮೊದಲ ಭಾರಿಗೆ ನ್ಯಾಯಾಲಯದಲ್ಲಿ ಹೇಳಿರುತ್ತೇನೆ ಎಂದರೆ ಸರಿ. ಸದರಿ ವಿಷಯವನ್ನು ನನ್ನ ದೂರಿನಲ್ಲಾಗಲೀ ಅಥವಾ ಹೇಳಿಕೆಯಲ್ಲಾಗಲೀ ಹೇಳಿರುವುದಿಲ್ಲ ಎಂದರೆ ಸರಿ.

18. ದೂರು ನೀಡಲು ನಾವು ಸಾಕ್ಷಿದಾರರು ಎಲ್ಲರೂ ಹೋಗಿದ್ದೆವು. ಯಾವ ದಿನಾಂಕದಂದು ದೂರನ್ನು ನೀಡಿದ್ದೆವು ಎಂದು ನನಗೆ ನೆನಪಿಲ್ಲ. ಗಲಾಟೆ ಯಾವ ದಿನಾಂಕದಂದು ಆಗಿತ್ತು ಎಂದು

ನನಗೆ ಈಗ ಹೇಳಲು ಬರುವುದಿಲ್ಲ. ಗಲಾಟೆಯಾಗಿದೆ ಎಂದು ಹೇಳುವ ದಿನಾಂಕದಿಂದ 14 ದಿನಗಳ ನಂತರ ದೂರನ್ನು ನೀಡಿರುತ್ತೇನೆ ಎಂದರೆ ಸರಿ. ನಾವು ಮತ್ತು ಚಾಸಾ.2 ರವರು ಸೇರಿಕೊಂಡು ಮಾತನಾಡಿ ಯಾವ ರೀತಿ ಫಿರ್ಯಾದು ನೀಡಬೇಕು ಎನ್ನುವುದನ್ನು ನಿರ್ಧರಿಸಿ ನಂತರ ನೀಡಿರುತ್ತೇವೆ ಎಂದರೆ ನಾವು ನಮ್ಮ ಮನೆಯಲ್ಲಿ ಚರ್ಚಿಸಿ ದೂರನ್ನು ನೀಡಿರುತ್ತೇವೆ, ವಿನಃ ಚಾಸಾ.2 ರವರು ಸೇರಿಕೊಂಡಿರುವುದಿಲ್ಲ. ನನ್ನ ದೂರನ್ನು ಪೊಲೀಸರು ನನ್ನ ಹೇಳಿಕೆಯ ಮೇರೆಗೆ ಬರೆದಿರುತ್ತಾರೆ. ದೂರಿನಲ್ಲಿ ಕೇವಲ ಸಹಿ ಮಾಡಿರುತ್ತೇನೆ ಮತ್ತು ಅದರಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ಚಾಸಾ.2 ರವರೇ ದೂರನ್ನು ಬರೆದಿರುತ್ತಾರೆ ಎಂದರೆ ಸರಿಯಲ್ಲ.

19. ಮಹಜರ್ ಮಾಡಲು ಪೊಲೀಸರು ಬಂದ ದಿನಾಂಕ ಹೇಳಲು ಬರುವುದಿಲ್ಲ. ಸಾಕ್ಷಿದಾರರನ್ನು ನಾನೇ ಕರೆದುಕೊಂಡು ಹೋಗಿದ್ದೆ ಎಂದರೆ ಗಿರಿಜಾ ಕರೆದುಕೊಂಡು ಹೋಗಿದ್ದರು. ಮಹಜರ್ ಮೊದಲು ನನಗೆ ನೋಟೀಸನ್ನು ನೀಡಿದ್ದರು. ಮಹಜರ್ ಸಂದರ್ಭದಲ್ಲಿ ನಾನು, ಚಾಸಾ.2, ಚಾಸಾ.14 ಮತ್ತು ಚಾಸಾ.15 ರವರು ಹಾಜರಿದ್ದೆವು. ಪಂಚನಾಮೆಯಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ ಮತ್ತು ಅವರು ಸಹಿ ಮಾಡಲು ಹೇಳಿದ್ದಕ್ಕೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿ. ಸಹಿಗಳನ್ನು ಠಾಣೆಯಲ್ಲಿ ಮಾಡಿರುತ್ತೇನೆ ಎಂದರೆ ಸರಿ.

20. ಫೋಟೋ ತೆಗೆಯುವ ಸಂದರ್ಭದಲ್ಲಿ ಪೊಲೀಸರು ಬಂದಿದ್ದರು. ಆ ಸಮಯದಲ್ಲಿ ಚಾಸಾ.2, ಚಾಸಾ.14 ಮತ್ತು ಚಾಸಾ.15 ರವರು ಇದ್ದರು. ನಿಪಿ.4 ಮತ್ತು ಪಿ.5 ರಲ್ಲಿ ಚಾಸಾ.2 ರವರು ಕಂಡುಬರುತ್ತಿಲ್ಲ ಎಂದರೆ ಸರಿ. ಸದರಿ ಫೋಟೋಗಳನ್ನು ಈ ಪ್ರಕರಣಗೋಸ್ಕರ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು

ಮತ್ತು ಮೀನಾ ಬಿಟ್ಟು ಬೇರೆ ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿ. ಫೋಟೋವನ್ನು ಯಾವ ದಿನಾಂಕದಂದು ತೆಗೆಯಲಾಗಿದೆ ಎಂದು ನನಗೆ ಹೇಳಲು ಬರುವುದಿಲ್ಲ.

21. ಪೊಲೀಸರು ನನ್ನ ಹೇಳಿಕೆಯನ್ನು ಪಡೆದಿರುತ್ತಾರೆ, ಆದರೆ ದಿನಾಂಕ ಹೇಳಲು ಬರುವುದಿಲ್ಲ. ನಾನು ದೂರು ನೀಡಿದ ಮೇಲೆ ಸರ್ಕಾರದಿಂದ ರೂ.75,000/- ಪರಿಹಾರ ಪಡೆದಿರುತ್ತೇನೆ.

22. ಚಾಸಾ.2 ರವರ ಮನೆಗೆ ಸುಮಾರು 20 ವರ್ಷಗಳಿಂದ ನಾವು ಹೋಗುತ್ತಾ ಬರುತ್ತೇವೆ. ಚಾಸಾ.2 ರವರ ಹೆಂಡತಿ ಸತ್ತು ಎಷ್ಟು ವರ್ಷಗಳಾದವು ಎಂದು ನನಗೆ ಗೊತ್ತಿಲ್ಲ. ಚಾಸಾ.2 ರವರ ಹೆಂಡತಿ ಸತ್ತ ನಂತರ ನಾವು ಅವರ ಮನೆಗೆ ಹೋಗಲು ಪ್ರಾರಂಭಿಸಿದೆವು ಎಂದರೆ ಸರಿಯಲ್ಲ.

23. ಚಾಸಾ.2 ರವರ ಮನೆ ಮತ್ತು ಆರೋಪಿಯ ಮನೆ ಅಕ್ಕಪಕ್ಕದಲ್ಲಿ ಇರುತ್ತದೆ ಎಂದರೆ ಸರಿ. ಚಾಸಾ.2 ರವರ ಮನೆಯ ಪಕ್ಕ ಸುಮತಿ ಎನ್ನುವ ಬ್ರಾಹ್ಮಣ ಹೆಂಗಸಿನ ಮನೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಯಾರ ಮನೆಯಲ್ಲಿ ಬಾಡಿಗೆಗೆ ಇರುತ್ತಾನೆ ಎಂದು ನನಗೆ ಗೊತ್ತಿಲ್ಲ. ಮೊದಲು ಆರೋಪಿ ಮತ್ತು ಚಾಸಾ.2 ಚೆನ್ನಾಗಿದ್ದರು ಎಂದರೆ ಸರಿ. ಚಾಸಾ.2 ರವರು ಎಲ್ಲಿಗಾದರೂ ಹೋಗಬೇಕಿದ್ದಲ್ಲಿ ಆರೋಪಿಯನ್ನು ಚಾಲಕನಾಗಿ ಕರೆದುಕೊಂಡು ಹೋಗುತ್ತಿದ್ದರು ಎಂದರೆ ಸರಿ.

24. ಚಾಸಾ.2 ರವರಿಗೆ ಇಬ್ಬರು ಗಂಡು ಮಕ್ಕಳು ಮತ್ತು ಅವರು ಹೊರಗಡೆ ಬೆಂಗಳೂರಿನಲ್ಲಿ ವಾಸಿಸುತ್ತಿದ್ದಾರೆ. ಚಾಸಾ.2 ಮತ್ತು ಆರೋಪಿ ಬೆಂಗಳೂರಿಗೆ ಹೋಗಿದಲ್ಲಿ ಚಾಸಾ.2 ರವರ ಮಕ್ಕಳ ಮನೆಯಲ್ಲಿ ಉಳಿಯುತ್ತಿದ್ದರು ಎಂದರೆ ಸರಿ. ಚಂದನ, ಲಲಿತಾ,

ಸಂಗೀತಾ, ಗೀತಾ, ಲೋಹಿತ್ ಮತ್ತು ಸುಧೀಂದ್ರ ಇವರು ಚಾಸಾ.2 ರವರಿಂದ ಸಾಲ ಪಡೆದುಕೊಂಡಿದ್ದರು ಎಂದರೆ ಆ ಕುರಿತು ನನಗೆ ಗೊತ್ತಿಲ್ಲ. ಇವರೆಲ್ಲರೂ ಪ್ರವಾಸಕ್ಕೆ ಹೋಗುತ್ತಿದ್ದರು ಎಂದರೆ ಸರಿ. ಈ ವಿಚಾರ ಗೊತ್ತಾದ ನಂತರ ಆರೋಪಿ ಚಾಸಾ.2 ರವರ ಮನೆಗೆ ಹೋಗುವುದನ್ನು ಬಿಟ್ಟರು ಎಂದರೆ ನನಗೆ ಗೊತ್ತಿಲ್ಲ. ಈ ವಿಚಾರ ಗೊತ್ತಾದ ನಂತರ ಚಾಸಾ.2 ರವರಿಗೆ ಅವರ ಮಕ್ಕಳು ಜೋರು ಮಾಡಿದ್ದರು ಎಂದರೆ ಆ ಕುರಿತು ನನಗೆ ಗೊತ್ತಿಲ್ಲ. ಆ ನಂತರ ನಾವು, ಚಾಸಾ.2 ರವರು ಸೇರಿ ಆರೋಪಿತನನ್ನು ಆ ಮನೆಯಿಂದ ಹೊರಗೆ ಓಡಿಸಬೇಕೆಂದು ಯೋಜನೆ ಮಾಡಿದ್ದೆವು ಎಂದರೆ ಸರಿಯಲ್ಲ. ಆರೋಪಿ ಇದ್ದ ಮನೆಯನ್ನು ಖರೀದಿಸಲು ಆತ ಕರಾರು ಮಾಡಿಕೊಂಡಿದ್ದ ಎಂದರೆ ಆ ವಿಚಾರ ನನಗೆ ಗೊತ್ತಿಲ್ಲ. ಆರೋಪಿತನನ್ನು ಆ ಮನೆಯಿಂದ ಹೊರಗೆ ಓಡಿಸಬೇಕೆಂದು ಚಾಸಾ.2 ರವರು ನಮ್ಮನ್ನೆಲ್ಲಾ ಸೇರಿಸಿ ನಮ್ಮ ಮೂಲಕ ಸುಳ್ಳು ದೂರನ್ನು ಕೊಡಿಸಿರುತ್ತಾರೆ ಎಂದರೆ ಸರಿಯಲ್ಲ.

25. ಚಂದನಾ ನನ್ನ ಸಂಬಂಧಿಕಳಲ್ಲ. ಅದೇ ದಿನ ನಾವು ಚಂದನಾಳ ಮುಖಾಂತರ ಆರೋಪಿಯ ಮೇಲೆ ಕೊಪ್ಪ ಪೊಲೀಸ್ ಠಾಣೆಯಲ್ಲಿ ಫಿರ್ಯಾದು ಕೊಡಿಸಿರುತ್ತೇವೆ ಎಂದರೆ ನನಗೆ ಗೊತ್ತಿಲ್ಲ.

26. 3 ವರ್ಷಗಳ ಹಿಂದೆ ಕೃಷ್ಣಮೂರ್ತಿಯು ಆರೋಪಿಯ ವಿರುದ್ಧ ಗಲಾಟೆ ಮಾಡಿದ್ದನು ಎಂದು ಫಿರ್ಯಾದು ನೀಡಿದ ವಿಚಾರ ನನಗೆ ಗೊತ್ತಿಲ್ಲ. ಆ ವಿಚಾರದಲ್ಲಿ ಪೊಲೀಸರು ಕೃಷ್ಣಮೂರ್ತಿಗೆ ಎಚ್ಚರಿಕೆ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಈಗ ನಾನು ಮತ್ತು ಕೃಷ್ಣಮೂರ್ತಿ ಚೆನ್ನಾಗಿರುವುದಿಲ್ಲ. ಪರಿಹಾರದಲ್ಲಿ ಭಾಗವನ್ನು ಚಾಸಾ.2 ರವರಿಗೆ ನೀಡಿರುವುದಿಲ್ಲ ಎಂದು ನಮ್ಮ ನಡುವೆ ಮನಸ್ತಾಪ ಉಂಟಾಗಿರುತ್ತದೆ

ಎಂದರೆ ಸರಿಯಲ್ಲ.

27. ಆರೋಪಿ ನಾನು ಹೇಳಿದಂತೆ ಚುಡಾಯಿಸುತ್ತಿದ್ದ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ, "ಆ ಬಗ್ಗೆ ಆರೋಪಿಯನ್ನು ------ ಆತನ ಮನೆಯ ಬಳಿ ಹೋದೆವು" ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

28. ಪೊಲೀಸರು ಸ್ಥಳಕ್ಕೆ ಬಂದು ಮಹಜರ್ ಮಾಡಿದ್ದರು ಎಂದು ನಾನು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ಸಾಕ್ಷಿದಾರರು ಹಾಜರಿದ್ದರು ಎಂದು ನಾನು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಆ ದಿನ ನಾನು ಪೊಲೀಸರಿಗೆ ಸ್ಥಳವನ್ನು ತೋರಿಸಿಲ್ಲ ಎಂದರೆ ಸರಿಯಲ್ಲ.

29. ನ್ಯಾಯಾಧೀಶರ ಮುಂದೆ ಪೊಲೀಸರು ಹೇಳಿದಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಕೊಪ್ಪ ಡಿ.ವೈ.ಎಸ್.ಪಿ. ಮುಂದೆ ನಾನು ಹೇಳಿಕೆ ನೀಡಿರುತ್ತೇನೆ ಎಂದು ನಾನು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ, "ನಾನು ಮತ್ತು ನಮ್ಮ ಅಕ್ಕಪಕ್ಕದ ಮನೆಯವರು ------ ಮು.ಮಾ.1 ಎಂದು ಗುರುತಿಸಲಾಯಿತು" ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

30. ಸರ್ಕಾರದಿಂದ ಪರಿಹಾರ ಸಿಗುತ್ತದೆ ಮತ್ತು ಅರೋಪಿಯನ್ನು ಆ ಸ್ಥಳದಿಂದ ಓಡಿಸುವ ಉದ್ದೇಶದಿಂದ ಚಾಸಾ.2 ರವರು ನಮ್ಮ ಮೂಲಕ ಸುಳ್ಳು ದೂರನ್ನು ಕೊಡಿಸಿದ್ದಾರೆ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಮು.ಮಾ.1 ಕ್ಕೂ ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಜಾತಿ ನಿಂದನೆ

ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u> ಇಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಕಿರಣ್ ಕಿಣಿ)
1 ನೇ ಹೆಚ್ಚುವರಿ ವಿಶೇಷ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಚಿಕ್ಕಮಗಳೂರು.

ಸಾಕ್ಷಿಯ ಸಹಿ